ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 27-07-1971.

*<u>ಬುದ್ಧಿರೂಪಿ ನೇತ್ರ ಸ್ವಷ್ಟ ಮತ್ತು ಶಕ್ತಿಶಾಲಿಯಾಗಿ ಮಾಡಿಕೊಳ್ಳಿ</u>* (बुद्धि रूपी नेत्र क्लीयर और पावरफुल बनाओ)

ಇಂದು ಭಟ್ಟಿಯ ಶಿಕ್ಷಣದ ಲಿಖಿತ ಪರೀಕ್ಷೆಯನ್ನು ನೀಡಿದಿರಿ, ನಾಳೆ ಯಾವ ಪೇಪರ್ ಶುರುವಾಗುವುದು ಎಂದು ತಿಳಿದಿದ್ದೀರಾ? ಪ್ರಾಕ್ಟಿಕಲ್ ಪೇಪರ್ ನಲ್ಲಿ ಯಾವ ಪ್ರಶ್ನೆಗಳು ಬರಲಿವೆ ಎಂಬುದನ್ನು ತಿಳಿದಿದ್ದೀರಾ? ಯಾವ ಪ್ರಕಾರದ ಪ್ರಶ್ನೆಗಳು ಬರುತ್ತವೆ? ಕಲ್ಪದ ಹಿಂದೆ ನಮ್ಮಿಂದ ಏನೇನಾಗಿದೆ ಎಂಬುದು ಸ್ಮೃತಿಯಲ್ಲಿದೆಯೇ? (ಹೌದು), ಇದು ಸ್ಮೃತಿಯಲ್ಲಿದ್ದಾಗ ಯಾವ ಪ್ರಶ್ನೆಗಳು ಬರುತ್ತವೆ ಎಂಬುದು ಸ್ಮೃತಿಯಲ್ಲಿಲ್ಲವೇ? ಮಾಯೆ ಎದುರಿಸುವುದು ಆದರೆ ಯಾವ ರೂಪದಲ್ಲಿ ಬರುವುದು ಎಂಬುದನ್ನು ತಿಳಿದಿದ್ದೀರೋ ಇಲ್ಲವೋ? ಮಾಸ್ಟರ್ ಜ್ಞಾನಪೂರ್ಣರಾಗಿ ಹೋಗುತ್ತಿರುವಿರಲ್ಲವೇ? ಮಾಸ್ಟರ್ ಜ್ಞಾನಪೂರ್ಣರಿಗೆ ಮೊದಲೇ ಎಲ್ಲವೂ ಗೊತ್ತಾಗುತ್ತದೆ. ವಿಜ್ಞಾನಿಗಳು ಹೇಗೆ ತಮ್ಮಯಂತ್ರದಿಂದ ಚಂಡಮಾರುತ ಅಥವಾ ಮಳೆ ಬರುವ ಅಥವಾ ಭೂಕಂಪ ಮುಂತಾದವುಗಳನ್ನು ಮೊದಲೇ ತಿಳಿದುಕೊಳ್ಳುತ್ತಾರೋ ಹಾಗೆ ತಾವೆಲ್ಲಾ ಮಾಸ್ಟರ್ ಜ್ಞಾನಪೂರ್ಣರಾಗುವುದರಿಂದ ಮೊದಲೇ ತಮ್ಮ ಬುದ್ಧಿಬಲದಿಂದ ತಿಳಿಯಲಾರಿರಾ? ದಿನದಿನಕ್ಕೆ ತಮ್ಮ ಸೃತಿಯ ಸಾಮರ್ಥ್ಯದಲ್ಲಿ ಬರುವಿರಿ ಎಂದರೆ ತಮ್ಮ ಆತ್ಮ ರೂಪಿ ನೇತ್ರವನ್ನು ಶಕ್ತಿಶಾಲಿ ಮಾಡುವಿರೋ, ಸ್ವಷ್ಟ ಮಾಡುವಿರೋ ಅಷ್ಟು ಯಾವುದೇ ವಿಘ್ನ ಬರುವುದಿದ್ದರೂ ಮೊದಲೇ ಈ ದಿನ ಯಾವುದಾದರೂ ಪೇಪರ್ ಬರುವುದಿದೆ ಎಂದು ಅನುಭವ ಮಾಡುವಿರಿ ಮತ್ತು ಎಷ್ಟೆಷ್ಟು ಮೊದಲೇ ಗೊತ್ತಾಗುವುದೋ ಅಷ್ಟು ಮೊದಲೇ ಹುಷಾರಾಗುವ ಕಾರಣ ವಿಘ್ನಗಳಲ್ಲಿ ಸಫಲತೆ ಪಡೆಯುವಿರಿ. ಇತ್ತೀಚಿನ ಸರಕಾರಕ್ಕೂ ಮೊದಲೇ ಶತ್ರುಗಳು ಬರುವವರಿದ್ದಾರೆಂಬುದು ಗೊತ್ತಾಗುತ್ತದೆ. ಮೊದಲೇ ತಯಾರಿ ಮಾಡಿಕೊಳ್ಳುವ ಕಾರಣ ವಿಜಯಿಯಾಗುತ್ತಾರೆ. ಅನಿರೀಕ್ಷಿತವಾದ ಆಕ್ರಮಣ ವಿಜಯಿಯಾಗಿಸುವುದಿಲ್ಲ. ಇಲ್ಲಿ ತ್ರಿಕಾಲದರ್ಶಿಯಾದ ಕಾರಣ ಕಲ್ಪದ ಮೊದಲಿನ ಸ್ಮೃತಿಯಿಂದ ಇದು ನಿನ್ನೆಯ ಮಾತು ಎಂದು ಅನುಭವ ಮಾಡುತ್ತೀರಿ ಮತ್ತು ಜ್ಞಾನಪೂರ್ಣರಾಗಿರುವ ಕಾರಣ ಮೂರನೆಯ ಬುದ್ಧಿ ರೂಪಿ ಕಣ್ಣು ಶಕ್ತಿಶಾಲಿ ಮತ್ತು ಸ್ವಷ್ಟವಾಗಿರುವ ಕಾರಣ ಮೊದಲೇ ಆ ಮಾತುಗಳನ್ನು ಗ್ರಹಿಸುತ್ತೀರಿ. ಮೂರೂ ಪ್ರಕಾರದಿಂದ ಗಮನವಿದ್ದರೆ ಅಥವಾ ಸ್ಥಿತಿಯಿದ್ದರೆ, ಮೊದಲೇ ಬರುವಂತಹ ವಿಘ್ನಗಳನ್ನು ಗುರುತಿಸಲಾರಿರಾ? ಮೊದಲೇ ಗೊತ್ತಾಗುವ ಕಾರಣ ಎಂದೂ ಸೋಲಾಗುವುದಿಲ್ಲ. ಸದಾ ವಿಜಯಿಯಾಗುವಿರಿ, ಕಣ್ಣು ಸರಿಯಾಗಿಲ್ಲದಿದ್ದರೆ ಅಥವಾ ಸಿ.ಆಯ್.ಡಿ ಯ ಪರಿಶೀಲನೆ ಸರಿಯಾಗಿಲ್ಲದಿದ್ದರೆ ಕೆಲವೊಮ್ಮೆ ಸರಕಾರವೂ ಮೋಸ ಹೋಗುತ್ತದೆ. ಇದೇ ರೀತಿ ಸದಾ ತಮ್ಮ ಬುದ್ಧಿರೂಪಿ ಕಣ್ಣುಗಳು ಸರಿಯಾಗಿ ಕೆಲಸ ಮಾಡುತ್ತಿವೆಯಾ ಎಂದು ತಿಳಿದುಕೊಂಡು ಸಂಭಾಳನೆ ಮಾಡಿ.

ಸಿ.ಆಯ್.ಡಿಯ ಮತ್ತೊಂದು ಅರ್ಥವೇನಾಗಿದೆ? ಪರಿಶೀಲನೆಯೇ ಸಿ.ಆಯ್.ಡಿ ಆಗಿದೆ. ಪರಿಶೀಲನೆ ರೂಪದ ಸಿ.ಆಯ್.ಡಿ ಹುಶಾರಾಗಿದ್ದರೆ ಎಂದಿಗೂ ಶತ್ರುವಿನಿಂದ ಸೋಲಾಗುವುದಿಲ್ಲ. ಆದ್ದರಿಂದ ಈಗಲೂ ಮೊದಲೇ ಗೊತ್ತಾಗುವಂತೆ ಪ್ರಯತ್ನ ಮಾಡಿ. ಮಳೆ ಬರುವಾಗ ಪ್ರಕೃತಿ ಮೊದಲೇ ಎಚ್ಚರಿಕೆಯನ್ನು ಕೊಡುತ್ತದೆ. ಜ್ಞಾನಪೂರ್ಣರಾಗಿದ್ದಾರೆ ಪ್ರಕೃತಿಯ ವಿಘ್ನದಿಂದ ರಕ್ಷಿಸಿಕೊಳ್ಳಬಹುದು. ಇಲ್ಲವಾದರೆ ಪ್ರಕೃತಿಯ ಭಿನ್ನಭಿನ್ನವಾದ ಚಿಕ್ಕಪುಟ್ಟ ದುಃಖದ ಅಥವಾ ರೋಗಗಳಿಗೆ ನಿಮಿತ್ತವಾಗುವಂತಹುಗಳಿಗೆ ಅಧೀನರಾಗುವಿರಿ. ಕಾರಣವೇನು? ಜ್ಞಾನ ಅಥವಾ ಗುರುತಿಸುವ ಕೊರತೆ, ಹೇಗೆ ನೆನಪಿನ ಶಕ್ತಿ ಎಂದರೆ ಶಾಂತಿಯ ಶಕ್ತಿಯನ್ನು ತುಂಬಿಕೊಳ್ಳುವಿರೋ ಅಷ್ಟು ಮೊದಲೇ ಇಂದು ಏನಾದರೂ ಆಗುವುದಿದೆ ಎಂದು ಮೊದಲೇ ಗೊತ್ತಾಗುವುದು. ಮತ್ತು ದಿನದಿನಕ್ಕೆ ಗಮನ ಕೊಡುವ ಮತ್ತು ಪರಿಶೀಲನೆ ಮಾಡುವಂತಹ ಅನನ್ಯ ಮಹಾರಥಿಗಳು ಈ ಅನುಭವ ಮಾಡುತ್ತಿರುವರು. ಜ್ವರ ಬರುವುದಿದ್ದರೆ ಮೊದಲೇ ಅದರ ಲಕ್ಷಣಗಳು ಕಂಡು ಬರುತ್ತವೆ. ಇದರಲ್ಲಿಯೂ ಜ್ಞಾನಪೂರ್ಣರಾಗಿದ್ದರೆ ಯಾವ ಪೇಪರ್ ಬರುವುದಿದೆಯೋ ಅದರ ಲಕ್ಷಣಗಳು ಅವಶ್ಯವಾಗಿರುತ್ತವೆ. ಆದರೆ ಗುರುತಿಸುವ ಶಕ್ತಿ ಶಕ್ತಿಶಾಲಿಯಾಗಿದ್ದರೆ ಎಂದೂ ಸೋಲುವುದಿಲ್ಲ. ಜ್ಯೋತಿಷಿಗಳು ತಮ್ಮ ಜ್ಯೋತಿಷ್ಯದ ಜ್ಞಾನದಿಂದ ಗ್ರಹಗಳ ಜ್ಞಾನದಿಂದ ಬರಲಿರುವ ವಿಪತ್ತುಗಳ ಬಗೆಗೆ ತಿಳಿದುಕೊಳ್ಳುತ್ತಾರೆ. ತಮ್ಮ

ಜ್ಞಾನದ ಮುಂದೆ ಅವರ ಜ್ಞಾನ ಏನೂ ಅಲ್ಲ, ತುಚ್ಚವಾಗಿದೆ. ತುಚ್ಚ ಜ್ಞಾನದವರು ತಮಗಿರುವ ಜ್ಞಾನದಿಂದ ಮುಂದಿನದನ್ನು ತಿಳಿದುಕೊಳ್ಳುತ್ತಾರೆ ಹಾಗಾದರೆ ತಾವು ಇಷ್ಟು ಶ್ರೇಷ್ಠ ಜ್ಞಾನದ ಮಾಸ್ಟರ್ ಜ್ಞಾನಪೂರ್ಣರು ಇದನ್ನು ತಿಳಿದುಕೊಳ್ಳಲಾರಿರಾ? ಬುದ್ಧಿ ರೂಪಿ ನೇತ್ರ ಸ್ಪಷ್ಟ ವಾಗಿಲ್ಲದಿದ್ದರೆ ತಿಳಿದುಕೊಳ್ಳಲು ಆಗುವುದಿಲ್ಲ. ಸ್ಪಷ್ಟವಾಗಿಲ್ಲದಿರುವುದಕ್ಕೆ ಕಾರಣವೇನು? ಕಾಳಜಿಯಿಲ್ಲ ಇದಕ್ಕೆ ಕಾರಣ ಜ್ಞಾನಪೂರ್ಣರಾಗಿಲ್ಲ. ಅದಕ್ಕೆ ಕಾರಣ ಶಕ್ತಿಶಾಲಿಯಾಗಿಲ್ಲ. ಶಕ್ತಿಶಾಲಿಯಲ್ಲದ ಕಾರಣ ಸಿಗಬೇಕಾದ ವಿಜಯದ ಪ್ರಾಪ್ತಿಯಾಗುವುದಿಲ್ಲ. ಆದ್ದರಿಂದ ತಮ್ಮ ನೇತ್ರವನ್ನು ಸ್ಪಷ್ಟವಾಗಿ ಇಟ್ಟುಕೊಳ್ಳುವುದು ಕಠಿಣವಾದ ಮಾತೇ? ಈ ಬಾರಿ ಭಟ್ಟಿಯಲ್ಲಿ ಬಂದಿರುವವರೆಲ್ಲ ಮಧುಬನದಿಂದ ಎಂದರೆ ವರದಾನ ಭೂಮಿಯಿಂದ ಯಾವ ವರದಾನವನ್ನು ತೆಗೆದುಕೊಂಡು ಹೋಗುವಿರಿ? ಒಂದು ತಮ್ಮ ಬುದ್ಧಿರೂಪಿ ನೇತ್ರವನ್ನು ಸ್ವಚ್ಛ ಮತ್ತು ಸ್ಪಷ್ಟ (clear- careful) ಇಟ್ಟುಕೊಳ್ಳುವುದು ಮತ್ತು ಮೊದಲೇ ಜ್ಞಾನಪೂರ್ಣರಾಗಿ ಪರೀಕ್ಷಿಸುವ ವರದಾನವನ್ನು ತೆಗೆದುಕೊಂಡು ಹೋಗಿ. ಅದರಿಂದ ಎಂದಿಗೂ ಮಾಯೆಯಿಂದ ಸೋಲನ್ನು ಅನುಭವಿಸುವುದಿಲ್ಲ. ಯಾರು ಮಾಯೆಯಿಂದ ಸೋಲುವುದಿಲ್ಲವೋ ಅವರನ್ನು ನೋಡುವವರು ಮತ್ತು ಕೇಳುವವರು ಬಲಿಹಾರಿಯಾಗುತ್ತಾರೆ. "ಬಾರಿಬಾರಿ ಸೋಲಬಾರದು", ಇದಾಗಿದೆ. ಪ್ರವೃತ್ತಿಯಲ್ಲಿರುತ್ತಾ ತಮ್ಮ ಸಮೀಪದವರು, ದೂರದವರು ಬಲಿಹಾರಿಯಾಗುವ ಯುಕ್ತಿ ಬಾರಿಬಾರಿ ಸೋಲುಂಡಾಗ ಅವರಿಗೆ ಯಾರು ತಾನೇ ಬಲಿಹಾರಿಯಾಗುತ್ತಾರೆ? ಆದ್ದರಿಂದ ತಮಗೆ ಎಂದರೆ ತಂದೆಗೆ ಬಲಿಹಾರಿ ಮಾಡಲು ಎಂದಿಗೂ ಸೋಲಬಾರದು. ಹಾರ ಹಾಕಿಸಿಕೊಳ್ಳಲು ಯೋಗ್ಯರಾಗಬೇಕೇ ಹೊರತು ಸೋಲಲು ಅಲ್ಲ, ಪ್ರವೃತ್ತಿಯಲ್ಲಿ ಇರುವಂತಹ ಪಾಂಡವರಿಗೆ ವಿಶೇಷ ರೂಪದ ಶಿಕ್ಷಣ ಇದಾಗಿದೆ. ತಮ್ಮ ಪ್ರವೃತ್ತಿಯಲ್ಲಿ ಹೋದಾಗ ಅದನ್ನು ಪ್ರವೃತ್ತಿಯೆಂದು ತಿಳಿಯುವಿರೋ ಅಥವಾ ಮತ್ತೆ ಏನಾದರೂ ತಿಳಿಯುವಿರೋ? ಪ್ರವೃತ್ತಿಯವರಾಗಿದ್ದೀರಿ ಎಂಬ ಹೆಸರು ಬದಲಾಯಿತಲ್ಲವೇ? ಈಗ ತಮ್ಮ ಪ್ರವೃತ್ತಿಯನ್ನು ಆದರ್ ಕುಮಾರ ಎಂದು ಹೇಳುವಿರಾ? ಪ್ರವೃತ್ತಿಯ ಸಂಕಲ್ಪ ಸ್ವಲ್ಪವೂ ಬರಬಾರದೇ? (ಈ ರೀತಿಯ ವಿಚಾರಗಳು ಬರುವ ಪ್ರಶ್ನೆಯೇ ಇಲ್ಲ) ಪ್ರಶ್ನೆ ಬರುತ್ತದೆ ಆದರೆ ವಿಚಾರ ಬರಬಾರದು. ನಾವು ಪ್ರವೃತ್ತಿ ಮಾರ್ಗದವರಾಗಿದ್ದೇವೆ ಎಂಬ ರಜಿಸ್ಟರ್ ಮುಚ್ಚಿ ಹೊಸ ಸೇವಾಧಾರಿಯ ರಜಿಸ್ಟರ್ ಇಟ್ಟಿದ್ದೇವೆ ಎಂದು ತಿಳಿಯುವಿರೇ? ದೀಪಾವಳಿಯಲ್ಲಿ ಹಳೆಯ ರಜಿಸ್ಟರ್ ಮುಗಿಸಿ ಹೊಸದನ್ನು ಶುರು ಮಾಡುತ್ತಾರೆ. ಹಾಗಾದರೆ ತಾವೆಲ್ಲರೂ ಸತ್ಯ ದೀಪಾವಳಿಯನ್ನು ಆಚರಿಸಿದಿರಾ? ಅವಿನಾಶಿ ದೀಪವನ್ನು ಬೆಳಗಿಸಿದಿರಾ? ಹಳೆಯ ಪ್ರವೃತ್ತಿಯ ಸ್ಮೃತಿಯ ಅಥವಾ ಹಳೆಯ ಸಂಸ್ಕಾರಗಳ ರಜಿಸ್ಟರ್ ಮುಕ್ತಾಯವಾಯಿತೇ? ಹೇಗೆ ಸ್ಮೃತಿಯೋ ಹಾಗೆ ಸಂಸ್ಕಾರಗಳು, ಹಾಗಾದರೆ ಈ ರಜಿಸ್ಟರ್ ಪೂರ್ಣ ಸುಟ್ಟು ಹಾಕಿದಿರಾ ಅಥವಾ ಸ್ವಲ್ಪ ಬದಿಗೆ ಇಟ್ಟಿರುವಿರಾ? ಒಂದು ವೇಳೆ ಬದಿಗೆ ಇಟ್ಟಿದ್ದರೆ ಎಂದಿಗಾದರೂ ಬುದ್ಧಿ ಅದರಲ್ಲಿ ಹೋಗುವುದು. ಸುಟ್ಟು ಭಸ್ಮ ಮಾಡಿದಿರೋ ಆಥವಾ ಒಮ್ಮೊಮ್ಮೆ ನೋಡುವ ಮನಸ್ಸಾಗುತ್ತದೋ? ಭಯ ಬರುವಂತಹ ಯಾವುದೇ ವಸ್ತುವನ್ನು ಎತ್ತಿಡುವುದರ ಬದಲಾಗಿ ಸುಟ್ಟುಹಾಕುವರು. ಸುಳ್ಳು ರಜಿಸ್ಟರ್ ಇಡುವವರು ಸರಕಾರಕ್ಕೆ ಹೆದರುತ್ತಾರೆ. ಆದ್ದರಿಂದ ಅದರ ಸುಳಿವು ಸಿಗದಂತೆ ಆ ಕಾಗದ – ಪತ್ರಗಳನ್ನು ಸುಟ್ಟು ಹಾಕುತ್ತಾರೆ. ಈ ರೀತಿ ಹಳೆಯ ಸ್ಮೃತಿಯ ರಜಿಸ್ಟರ್ ಪೂರ್ಣ ಸುಟ್ಟು ಭಸ್ಮ ಮಾಡಿ ಹೋಗಿ. ಒಂದಾಗಿದೆ ಬದಿಗಿಡುವುದು, ಎರಡನೆಯದಾಗಿದೆ ಪೂರ್ಣ ಸುಟ್ಟು ಹಾಕುವುದು. ರಾವಣನನ್ನು ಕೇವಲ ಕೊಲ್ಲುವುದಿಲ್ಲ ಆದರೆ ಜೊತೆಜೊತೆಗೆ ಸುಟ್ಟು ಹಾಕುತ್ತಾರೆ. ಆದ್ದರಿಂದ ಇವುಗಳನ್ನು ಕೇವಲ ಬದಿಗೆ ಇಟ್ಟರೂ ಅದರ ಚಿಹ್ನೆ ಉಳಿಯುವುದು. ಹಳೆಯ ರಜಿಸ್ಟರಿನ ಚಿಕ್ಕ ಹಿಂದಿನ ಕಾಗದದಿಂದಲೂ ಸಿಕ್ಕಿಹಾಕಿಕೊಳ್ಳುವಿರಿ. ಮಾಯೆ ಬಹಳ ಚತುರ, ಅದರ ಗ್ರಹಿಸುವ ಶಕ್ತಿಯೇನು ಕಡಿಮೆಯಿಲ್ಲ. ಹೇಗೆ ಸರಕಾರದ ಅಧಿಕಾರಿಗಳು ಸ್ವಲ್ಪ ಸುಳಿವು ಸಿಕ್ಕರೂ ಆದರ ಆಧಾರದ ಮೇಲೆ ಹಿಡಿಯುತ್ತಾರೆ. ಸ್ವಲ್ಪ ಚಿಹ್ನೆಯನ್ನು ಬದಿಗಿಟ್ಟರೆ ಮಾಯೆ ಯಾವುದಾದರೂ ರೀತಿಯಿಂದ ಹಿಡಿಯುತ್ತದೆ, ಆದ್ದರಿಂದ ಸುಟ್ಟು ಹಾಕಿ ಹೋಗಿ. ಕುಮಾರರಿಗೆ ಜೇಬುಖರ್ಚಿಗೆ ಇಟ್ಟುಕೊಳ್ಳುವ ಸಂಸ್ಕಾರವಿರುತ್ತದೆ ಎಂದು ಹೇಳಿದ್ದೆವಲ್ಲವೇ, ಅದೇ ರೀತಿ ಪ್ರವೃತ್ತಿ ಮಾರ್ಗದವರಲ್ಲಿಯೂ ಅಲ್ಪಸ್ವಲ್ಪ ಅನಿವಾರ್ಯತೆಗೆ ಇಟ್ಟುಕೊಳ್ಳುವ ವಿಶೇಷ ಸಂಸ್ಕಾರವಿರುತ್ತದೆ. ಲಕ್ಷಾಧೀಶ್ವರನಾಗಿರಲಿ, ಎಷ್ಟೇ ಸ್ನೇಹಿಯಾಗಿರಲಿ ಅವರಲ್ಲಿ ಈ ಸಂಸ್ಕಾರವಿರುತ್ತದೆ. ಈಗ ಈ ಸಂಸ್ಕಾರ ಇಲ್ಲಿಯೂ ಪುರುಷಾರ್ಥದಲ್ಲಿ ವಿಘ್ನರೂಪವಾಗುತ್ತದೆ. ಕೆಲವರು ಸ್ವಲ್ಪವಾದರೂ ಗರ್ವದ ಸಂಸ್ಕಾರವನ್ನು ಇಟ್ಟುಕೊಳ್ಳದಿದ್ದರೆ ಪ್ರವೃತ್ತಿ ಹೇಗೆ ನಡೆಯುವುದು ಎಂದು ಯೋಚಿಸುತ್ತಾರೆ. ಅಥವಾ ಲೋಭದ ಸಂಸ್ಕಾರ ಭಿನ್ನ

ರೂಪದಲ್ಲಿ ಇಲ್ಲದಿದ್ದರೆ ಸಂಪಾದನೆ ಹೇಗೆ ಮಾಡುವವು ಅಥವಾ ಅಹಂಕಾರದ ರೂಪವಿಲ್ಲದಿದ್ದರೆ ಜನರ ಮುಂದೆ ವ್ಯಕ್ತಿತ್ವ ಹೇಗೆ ಕಂಡುಬರುವುದು. ಇಂತಹ ಸಮಯದಲ್ಲಿ ಎಂದರೆ ಅನಿವಾರ್ಯತೆಗೆ ಸ್ವಲ್ಪ ಹಳೆಯ ಸಂಸ್ಕಾರಗಳ ಖಜಾನೆಯನ್ನು ಬಚ್ಚಿಟ್ಟುಕೊಂಡಿರುತ್ತೇವೆ ಎಂದು ಕೆಲವರು ತಿಳಿಯುತ್ತಾರೆ. ಈ ಸಂಸ್ಕಾರವೇ ಮೋಸ ಮಾಡುತ್ತದೆ. ಇದೇನು ವ್ಯಕ್ತಿತ್ವವಲ್ಲ ಅಥವಾ ಈ ಹಳೆಯ ಸಂಸ್ಕಾರಗಳ ರೂಪ, ಪ್ರವೃತ್ತಿಯನ್ನು ಪಾಲನೆ ಮಾಡುವ ಸಾಧನವೂ ಅಲ್ಲ. ಹಳೆಯ ಸಂಸ್ಕಾರಗಳ ಲೋಭ ರಾಯಲ್ (royal) ರೂಪದಲ್ಲಿರುತ್ತದೆ. ಆದರೆ ಅದು ಲೋಭದ ಅಂಶವಾಗಿದೆ.

ಉದಾಹರಣೆಗೆ ಪ್ರವೃತ್ತಿಯವರು ಎಲ್ಲಿಗಾದರೂ ಉದ್ಯೋಗ- ವ್ಯವಹಾರಕ್ಕಾಗಿ ಹೋದಾಗ ಅಲ್ಪಸ್ವಲ್ಪ ಹೆಚ್ಚು ಪ್ರಾಪ್ತಿಯಾದರೆ, ಈಶ್ವರೀಯ ಸಂಪಾದನೆಯನ್ನು ಕಡಿಮೆ ಮಾಡಿ ಅದೇ ಪ್ರಾಪ್ತಿಯಲ್ಲಿ ತೊಡಗುವಿರಿ. ಈ ಕಡೆಗೆ ಕಡಿಮೆ ಗಮನ ಕಡಿಮೆ ಕೊಟ್ಟು ಹೆಚ್ಚು ಪ್ರಾಪ್ತಿಯ ಕಡೆಗೆ ಗಮನ ಕೊಡುತ್ತೀರಿ ಎಂದು ತಿಳಿಯಿರಿ. ಹಾಗಾದರೆ ಇದು ಲೋಭದ ಅಂಶವಲ್ಲವೇ? ಅದೇ ರೀತಿ ಅನಿವಾರ್ಯತೆಗೆ ಹಳೆಯ ಸಂಸ್ಕಾರಗಳ ಸಂಪತ್ತನ್ನು ಎಂದರೆ ಖಜಾನೆಯಿಂದ ಅಲ್ಪಸ್ವಲ್ಪ ಸಮಯ ಬಂದಾಗ ಉಪಯೋಗಿಸಲು ಬದಿಗಿಡುತ್ತೀರಿ. ಆದರೆ ಈ ಸಂಸ್ಕಾರವನ್ನೂ ಸಮಾಪ್ತಿಗೊಳಿಸಿ. ಯಾವ ಮೂಲೆಯಲ್ಲಿಯೂ ಸ್ವಲ್ಪ ಕೂಡ ಇಂತಹ ಹಳೆಯ ಸಂಸ್ಕಾರಗಳು ಇಲ್ಲವೇ ಎಂದು ಈ ರೀತಿ ಪರಿಶೀಲನೆ ಮಾಡಬೇಕು. ಮೋಹವೂ ಇರುತ್ತದೆ. ಪ್ರವೃತ್ತಿಯ ಕಡೆಗೆ ಹೆಚ್ಚು ಗಮನ ಕೊಡುವುದು ಸಹ ರಾಯಲ್ ರೂಪದಲ್ಲಿ ಮೋಹದ ಅಂಶವಾಗಿದೆ. ಈ ಬೇಹದ್ದಿನ ಪ್ರವೃತ್ತಿ 21 ಜನ್ಮಗಳವರೆಗೆ ನಡೆಯುತ್ತದೆ ಮತ್ತು ಈ ತಪಸ್ಸು ಕರ್ಮಬಂಧನವನ್ನು ಚುಕ್ತಾ ಮಾಡುವ ಪ್ರವೃತ್ತಿಯಾಗಿದೆ. ಹಾಗಾದರೆ ಕರ್ಮ ಬಂಧನವನ್ನು ಚುಕ್ತಾ ಮಾಡುವ ಪ್ರವೃತ್ತಿಯ ಕಡೆಗೆ ಹೆಚ್ಚು ಗಮನಕೊಡುತ್ತೀರಿ ಮತ್ತು ಈ ಕಡೆಗೆ ಕಡಿಮೆ ಗಮನಕೊಡುತ್ತೀರಿ ಎಂದರೆ ಮೋಹ-ಮಮತೆಯ ರೂಪವಾಯಿತಲ್ಲವೇ? ಈ ಅಂಶ ವೃದ್ಧಿಯನ್ನು ಪಡೆಯುತ್ತಾ ವಿಘ್ನ ರೂಪವಾಗಿ ವಿಜಯಾಗುವಲ್ಲಿ ಸೋಲನ್ನು ಕೊಡುತ್ತದೆ. ಆದ್ದರಿಂದ ಪ್ರವೃತ್ತಿಯವರು ಸ್ಥೂಲ ರೂಪದಲ್ಲಿ ಮಹಾದಾನಿ, ಮಹಾಜ್ಞಾನಿಯಾಗಿರಬಹುದು ಆದರೆ ಈ ಬದಿಗಿರಿಸಿದ್ದ ವಿಕಾರಗಳ ವಂಶದ ಅಂಶವನ್ನು ನಾಶ ಮಾಡಬೇಕು. ಇದರ ಬಗೆಗೆ ಗಮನವನ್ನು ಇಟ್ಟುಕೊಳ್ಳಬೇಕು. ಕೋರ್ಸ್ ಸಿಕ್ಕಿತು ಪಾರಾದೆವು ಹಾಗಲ್ಲ. ಈಗ ಇದರಲ್ಲಿ ಪಾಸಾಗಬೇಕು. ಯಾವುದೇ ಮೂಲೆಯಲ್ಲಿಯೂ ಒಂದಿಷ್ಟೂ ಹಳೆಯ ಖಜಾನೆಯ ಚಿಹ್ನೆ ಇರಕೂಡದು. ಇದನ್ನು ಹೇಳಲಾಗುತ್ತದೆ ಮರುಜೀವಾ ಅಥವಾ ಸರ್ವಸ್ವ ತ್ಯಾಗಿ ಅಥವಾ ಸರ್ವ ಸಮರ್ಪಣ ಅಥವಾ ನಿಮಿತ್ತ (trustee), ಅಥವಾ ಯಜ್ಞದ ಸ್ನೇಹಿ ಅಥವಾ ಸಹಯೋಗಿ. ಇದಾಗಿದೆ ಕೋರ್ಸ್ ಭಲೆ ನಿಮಿತ್ತ ಶಿಕ್ಷಕಿ ಕೋರ್ಸ್ ಕೊಟ್ಟಿರಬಹುದು. ಆದರೆ ಕೋರ್ಸನ ಹಿಂದೆ ಶಕ್ತಿ (force) ಬೇಕು. ಕೇವಲ ಕೋರ್ಸ್ ಮಾಡಿ ಹೋಗುತ್ತೀರಿ. ಆದರೆ ಪರೀಕ್ಷೆ ಕೊಡುವ ಸಮಯ ಮರೆತು ಹೋಗುತ್ತದೆ. ಕೋರ್ಸ್‌ನ ಜೊತೆಗೆ ಶಕ್ತಿಯನ್ನು ತುಂಬಿಕೊಂಡು ಹೋದರೆ, ಆ ಶಕ್ತಿ ಸಫಲ ಮಾಡುವುದು, ಎಂದೂ ನಾಪಾಸಾಗುವುದಿಲ್ಲ. ಆದ್ದರಿಂದ ಈ ಶಕ್ತಿಯನ್ನು ತುಂಬಿಕೊಂಡು ಹೋಗಿ, ಆಗ ಸದಾ ವಿಜಯೀ ಆಗುವಿರಿ. ಸ್ವಲ್ಪವೂ ವಿಕಾರದ ಚಿಹ್ನೆಯಿರುವುದಿಲ್ಲ. ಚಿಹ್ನೆಯಿರುವ ಕಾರಣದಿಂದಲೇ ಬುದ್ಧಿಯ ಗುರಿ ತಾಕುವುದಿಲ್ಲ. ಇಷ್ಟು ಉನ್ನತವಾದ ಪರೀಕ್ಷೆಯಿದೆ. ಚಿಕ್ಕಚಿಕ್ಕ ಪರೀಕ್ಷೆಯಲ್ಲಿ ಪಾಸಾಗುವುದು ದೊಡ್ಡ ಮಾತಲ್ಲ. ಆದರೆ ಗೌರವಯುತವಾಗಿ ತೇರ್ಗಡೆಯಾಗುವುದರ ಲಕ್ಷಣ (pass with honor) ಸೂಕ್ಷ್ಮ, ಗುಹ್ಯವಾದ ಪರೀಕ್ಷೆಯಲ್ಲಿ ಪಾಸಾಗುವುದಾಗಿದೆ ಆದ್ದರಿಂದ ಈಗ ಏನು ಮಾಡಬೇಕು ಎಂದು ತಿಳಿಯಿತೇ? ತಮ್ಮ ಹಳೆಯ ರೆಜಿಸ್ಟರನ್ನು ಪೂರ್ಣ ಸುಟ್ಟು ಭಸ್ಮ ಮಾಡಿ. ಇಷ್ಟು ಶಕ್ತಿಯನ್ನು ತುಂಬಿಕೂಂಡರೂ ಸಾಕು ಜಾಸ್ತಿಯೇ ಆಗುತ್ತದೆ. ಬಟ್ಟೆಯನ್ನು ಒಗೆದ ನಂತರ ಇಸ್ತ್ರಿ ಮಾಡದಿದ್ದರೆ ಹೊಳಪು ಬರುವುದಿಲ್ಲ. ಹಾಗೆಯೇ ಇದೂ ಸಹ ಕೋರ್ಸನ ನಂತರ ಶಕ್ತಿಯನ್ನು ತುಂಬದಿದ್ದರೆ ಚಮತ್ಕಾರಿಯಾಗಿ ಚಮತ್ಕಾರ ತೋರಿಸದಿದ್ದಂತೆ. ಆದ್ದರಿಂದ ಈಗ ಚಮತ್ಕಾರಿಯಾಗಿ ದೂರದಿಂದಲೇ ತಮ್ಮ ಈಶ್ವರೀಯ ಹೊಳಪು ಆತ್ಮರನ್ನು ಆಕರ್ಷಣೆ ಮಾಡಲಿ. ದೂರದಿಂದಲೇ ಇಚ್ಛೆಯಿಲ್ಲದಿದ್ದರೂ, ಎಲ್ಲಕ್ಕಿಂತ ಹೆಚ್ಚು ತನ್ನೆಡೆಗೆ ಆಕರ್ಷಿಸುವಂತಹ ವಸ್ತು ಯಾವುದು? (ಹೊಳಪು) ಯಾವುದರಿಂದ ಇದು ಬರುತ್ತದೆ? ತಮ್ಮ ಪ್ರದರ್ಶನಿಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಯಾವುದು ಆಕರ್ಷಿಸುತ್ತದೆ? ಒಂದು ಪ್ರಕಾಶ (ಲೈಟ್), ಎರಡನೆಯದು ಶಕ್ತಿ (ಮೈಟ್) ತನ್ನೆಡೆಗೆ ಆಕರ್ಷಿಸುತ್ತದೆ. ಆದ್ದರಿಂದ ತಮ್ಮಲ್ಲಿ ಈಶ್ವರೀಯ ಪ್ರಕಾಶ ಮತ್ತು ಸ್ವಯಂನ ಪರಿವರ್ತನೆಯ ಶಕ್ತಿ ಇದ್ದಾಗ ಮಾತ್ರ ಆಕರ್ಷಿಸಬಲ್ಲಿರಿ. ಯಾರಿಗೆ ತಮ್ಮನ್ನು ಪರಿವರ್ತನೆ

ಮಾಡಿಕೊಳ್ಳಲಾಗುವುದಿಲ್ಲವೋ  ಅವರು ಎಲ್ಲರನ್ನೂ ಆಕರ್ಷಿಸಲಾರರು. ಸ್ವಯಂನ ಪರಿವರ್ತನೆಯ ಪ್ರಕಾಶ ಮತ್ತು ಶಕ್ತಿಯನ್ನು ತಮ್ಮಲ್ಲಿ ಧಾರಣೆ ಮಾಡಿಕೊಂಡಾಗ ಪ್ರತಿಯೊಂದು ಆತ್ಮನನ್ನೂ ತಮ್ಮೆಡೆಗೆ ಆಕರ್ಷಿಸಬಹುದು. ಒಳ್ಳೆಯದು.

ಅವ್ಯಕ್ತ ಮುರಳಿ 27-07-1971.

***ಬುದ್ಧಿರೂಪಿ ನೇತ್ರವನ್ನು ಸ್ವಷ್ಟ ಮತ್ತು ಶಕ್ತಿಶಾಲಿಯಾಗಿ ಮಾಡಿಕೊಳ್ಳಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನನ್ನ ಬುದ್ಧಿಯ ಬಲದಿಂದ ಮೊದಲೇ ಎಲ್ಲವನ್ನೂ ತಿಳಿದುಕೊಂಡಿರುವ ಮಾಸ್ಟರ್ ಜ್ಞಾನ ಸಾಗರನು.

2. ನಾನು ಸ್ಮೃತಿಯ ಸಮರ್ಥತೆಯಿಂದ ನನ್ನ ಆತ್ಮರೂಪಿ ನೇತ್ರವನ್ನು ಶಕ್ತಿಶಾಲಿಯಾಗಿ, ಸ್ಪಷ್ಟವಾಗಿ ತಯಾರು ಮಾಡಿಕೊಂಡು, ಯಾವ ವಿಷಯವನ್ನಾದರೂ ಮೊದಲೇ ಅನುಭವದಿಂದ ತಿಳಿದುಕೊಂಡು ಸಫಲತೆಯನ್ನು ಪಡೆದಿರುವ ಸಫಲತಾ ಮೂರ್ತಿ.

3. ನಾನು ಕಲ್ಪಪೂರ್ವದ ವಿಷಯಗಳನ್ನು ನಿನ್ನೆಯ ವಿಷಯದಂತೆ ಸ್ಪಷ್ಟವಾಗಿ ತಿಳಿದುಕೊಂಡಿರುವ ತ್ರಿಕಾಲದರ್ಶಿ.

4. ನಾನು ಸದಾ ಬುದ್ಧಿರೂಪಿ ನೇತ್ರದಿಂದ ವಿಧಿಯನ್ನು ಯತಾರ್ಥವಾಗಿ ಪರಿಶೀಲಿಸಿಕೊಂಡು ನನ್ನಲ್ಲಿ ಶಾಂತಿಯ ಶಕ್ತಿ, ಸ್ಮೃತಿಯ ಶಕ್ತಿಯನ್ನು ತುಂಬಿಕೊಂಡಿರುವ ಅಮೂಲ್ಯವಾದ ಮಹಾರಥಿ.

5. ನಾನು ಮಾಯೆಯ ಮೇಲೆ ವಿಜಯವನ್ನು ಹೊಂದಿ ಎಲ್ಲರನ್ನೂ ಸ್ವಯಂ ಮತ್ತು ತಂದೆಗೆ ಬಲಿಹಾರಿಯನ್ನಾಗಿ ಮಾಡಿದ್ದೇನೆ.

6. ನಾನು ಹಳೆಯ ಸಂಸ್ಕಾರಗಳ ಸ್ಮೃತಿಯನ್ನು, ಹಳೆಯ ಪ್ರವೃತ್ತಿಯ ಸ್ಮೃತಿಯನ್ನು ಸುಟ್ಟುಹಾಕಿ ಈಶ್ವರೀಯ ಸೇವಾಧಾರಿ ಎಂಬ ಹೊಸ ರೆಜಿಸ್ಟರ್ ಅನ್ನು ತೆರೆದಿದ್ದೇನೆ.

7. ನಾನು ಪ್ರವೃತ್ತಿಯಲ್ಲಿ ಇರುತ್ತಲೂ ತಂದೆಗೆ ಸ್ನೇಹಿಯಾಗಿ, ವಿಕಾರಗಳೆಲ್ಲವನ್ನೂ ಸಮಾಪ್ತಿ ಮಾಡಿಕೊಂಡು, ಈಶ್ವರೀಯ ಖಜಾನೆಯನ್ನು ಜಮಾ ಮಾಡಿಕೊಂಡಿರುವ ಪ್ರಾಪ್ತಿ ಸ್ವರೂಪ.

8. ನಾನು ವಿಕಾರಗಳ ವಂಶದ ಅಂಶವನ್ನು ಸಮಾಪ್ತಿ ಮಾಡಿರುವ ಮಹಾಜ್ಞಾನಿ ಮತ್ತು ಮಹಾದಾನಿ.

9. ನಾನು ಹಳೆಯ ಸಂಸ್ಕಾರಗಳೆಲ್ಲವನ್ನು ಭಸ್ಮ ಮಾಡಿರುವ ಯಜ್ಞಸ್ನೇಹಿ ಮತ್ತು ಸಹಯೋಗಿ.

10.  ನಾನು ಸೂಕ್ಷ್ಮ ಮತ್ತು ಆಳವಾದ ಪೇಪರ್ ನಲ್ಲಿ ಪಾಸಾಗಿರುವ ಪಾಸ್ ವಿತ್ ಹಾನರ್ ಸ್ವರೂಪ.

11. ನಾನು ಸ್ವಯಂನಲ್ಲಿ ಈಶ್ವರೀಯ ಪ್ರಕಾಶ ಮತ್ತು ಸ್ವಯಂನ ಪರಿವರ್ತನೆ ಮಾಡಿಕೊಂಡು ಶಕ್ತಿಯನ್ನು ತುಂಬಿಕೊಂಡು, ಧಾರಣೆ ಮಾಡಿ ಎಲ್ಲರನ್ನೂ ಆಕರ್ಷಿಸಿರುವ ಆಕರ್ಷಣಾ ಮೂರ್ತಿ.